ಈ ಅಸಮಾನತೆಯ ಗೋಡೆ ಕೆಡವಲು ವಾಸುದೇವ ಕಾಳೆ, ಹೋರಾಟವನ್ನೇ ಅಸ್ತ್ರ ಮಾಡಿಕೊಂಡಿದ್ದಾರೆ. ಈ ಕಾರಣಕ್ಕಾಗಿಯೇ ಮೂವತ್ತಕ್ಕೂ ಅಧಿಕ ಮೊಕದ್ದಮೆಗಳನ್ನು ಮೈಮೇಲೆ ಹೇರಿಕೊಂಡಿದ್ದಾರೆ. ಸಮುದಾಯದ ಅಸ್ಮಿತೆ ವಿಚಾರದಲ್ಲಿ ಅವರದ್ದು ರಾಜಿ ಆಗದ ಮನೋಭಾವ. ಪೇಟೆಯಲ್ಲಿ ಎಲ್ಲೇ ಕಳ್ಳತನವಾದರೂ ಓಣಿ ಮಂದಿಯನ್ನು ಪೊಲೀಸರು ಎಳೆದೊಯ್ಯುತ್ತಾರೆ. 'ಪೊಲೀಸರ ಕೇಸಿನಿಂದ ಜೀವನ ಹೈರಾಣ ಆಗಿದೆ' ಎನ್ನುತ್ತಾರೆ ವಾಸುದೇವ ಕಾಳೆ.

ವಾಸುದೇವ ಕಾಳೆ ತಕ್ಕಮಟ್ಟಿಗೆ ಶಿಕ್ಷಿತರು. ಅಂಗವಿಕಲರ ವಿಭಾಗದಲ್ಲಿ ದೇಹದಾರ್ಢ್ಯಪಟು, ಕಬಡ್ಡಿ ಆಟಗಾರ. ಇವರ ಕ್ರೀಡಾ ಅಭಿರುಚಿಯೇ ನಾಲ್ವರು ಮಕ್ಕಳಲ್ಲಿ ವ್ಯಕ್ತವಾಗುತ್ತಿದೆ. ಹರಣಶಿಕಾರಿ ಸಮುದಾಯದ ಸಹಕಾರಿ ಸಂಘದಲ್ಲಿ ಇವರಿಗೆ ಸಣ್ಣ ಕೆಲಸ. ಅಲ್ಪ ಆದಾಯದಲ್ಲೇ ಸಂಸಾರದ ನೊಗ ಹೊತ್ತಿದ್ದಾರೆ. ಸಮುದಾಯದ ಮಕ್ಕಳಿಗೆ ಸ್ಪರೋಸ್ ಸಂಸ್ಥೆ ನೆರವಿನೊಂದಿಗೆ ಕಲಿಕಾ ಕೇಂದ್ರ ನಡೆಸುತ್ತಿದ್ದಾರೆ. ಗುಜರಾತಿ, ಹಿಂದಿ, ಮರಾಠಿ ಮಿಶ್ರಿತ ವಾಗ್ರಿ ಭಾಷೆ ಮಾತಾಡೋ ಸಮುದಾಯದ ಮಕ್ಕಳಿಗೆ ಕನ್ನಡ ಕಲಿಸುತ್ತಾರೆ. ಬದುಕಿನ ಪಾಠಗಳೊಂದಿಗೆ ಆಟಕ್ಕೆ ವಿಶೇಷ ಒತ್ತು.

ಈ ಅಲೆಮಾರಿ ಸಮುದಾಯದ ಕುಡಿ ಅಶ್ವಿನಿ. ವಾಸುದೇವ ಕಾಳೆ ಅವರ ಹಿರಿ ಮಗಳು. ಜುಡೊ ಮತ್ತು ಕುರಾಶ್‌ನಲ್ಲಿ ಭರವಸೆಯ ಚಿಗುರು. ಇಪ್ಪತ್ತಮೂರು ವರ್ಷದ ಅಶ್ವಿನಿ, ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಬಿ.ಪಿ.ಎಡ್ ವಿದ್ಯಾರ್ಥಿನಿ. ಕ್ರೀಡೆಯಲ್ಲಿ ಬಹುಮುಖ ಪ್ರತಿಭೆ. 2019ರಿಂದ ವಿಜಯಪುರ ಜಿಲ್ಲಾಮಟ್ಟದ ಓಟದ ಸ್ಪರ್ಧೆಯೊಂದಿಗೆ ಅವರ ಕ್ರೀಡಾ ಜೀವನ ತೆರೆದುಕೊಳ್ಳುತ್ತದೆ.

ರಾಷ್ಟ್ರಮಟ್ಟದ ಕುರಾಶ್ ಪಂದ್ಯಾವಳಿಯಲ್ಲಿ ಒಮ್ಮೆ ಎರಡನೇ ಬಹುಮಾನ, ಮತ್ತೊಮ್ಮೆ ಮೂರನೇ ಬಹುಮಾನ ಪಡೆದಿದ್ದಾರೆ. ರಾಜ್ಯಮಟ್ಟದ ಟೆಕ್ವಾಂಡೋದಲ್ಲಿ ಮೊದಲನೇ ಬಹುಮಾನ, ರಾಜ್ಯಮಟ್ಟದ ಕುಸ್ತಿಯಲ್ಲಿ ಮೊದಲ ಬಹುಮಾನ, ಬೆಳಗಾವಿ ಮಟ್ಟದ ಜುಡೊ ಪಂದ್ಯದಲ್ಲಿ ಮೊದಲ ಬಹುಮಾನ ಪಡೆಯುವ ಮೂಲಕ ಕ್ರೀಡೆಗಳಲ್ಲಿ ಪಾರಮ್ಯ ಸಾಧಿಸಿದ್ದಾರೆ. 2022–23ರಲ್ಲಿ ಪಂಜಾಬ್‌ನ ಅಮೃತಸರದಲ್ಲಿ ನಡೆದ ಖೇಲೊ ಇಂಡಿಯಾ ನ್ಯಾಷನಲ್ ಲೀಗ್ ಜುಡೊ ಪಂದ್ಯದಲ್ಲಿ ಬೆಳ್ಳಿ ಪದಕ, 2023–24ರಲ್ಲಿ ಕೇರಳದ ತ್ರಿಶೂರ್‌ನಲ್ಲಿ ನಡೆದ ಪಂದ್ಯದಲ್ಲಿ ಕಂಚು ಪದಕ, ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಜುಡೊ ಪಂದ್ಯದಲ್ಲಿ ಚಿನ್ನದ ಪದಕಕ್ಕೆ ಭಾಜನರು. 2023–24ರಲ್ಲಿ ಸೆಂಟ್ರಲ್ ಏಷ್ಯಾದ ತುರ್ಕಮೆನಿಸ್ತಾನದ ಅಂತರರಾಷ್ಟ್ರೀಯ ಜುಡೊ ಪಂದ್ಯಾವಳಿಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

'ಶಾಲಾ ದಿನಗಳಲ್ಲಿ ಓಟ, ವಾಲಿಬಾಲ್, ಕುಸ್ತಿಯಂತಹ ಸ್ಪರ್ಧೆಯಲ್ಲಿ ಆಸಕ್ತಿ ಬೆಳೆಸಿಕೊಂಡೆ. ಕ್ರೀಡಾಪಟುವಾಗಿದ್ದ ತಂದೆಯೂ ನನ್ನ ಆಸಕ್ತಿಗೆ ನೀರೆರೆದು ಪೋಷಿಸಿದರು. ಓಣಿ ಸಮೀಪದ ಶಾಲಾ ಮೈದಾನವೇ ಅಭ್ಯಾಸದ ಕ್ರೀಡಾಂಗಣ. ಯಾವುದೇ ಕ್ಲಬ್ ಸದಸ್ಯತ್ವ ನಮಗೆ ಕನಸಿನ ಮಾತು. ಬೇಕಾದ ಸಂಪರ್ಕ, ಹಣಕಾಸಿನ ನೆರವಿನ ಮಾತು ಇನ್ನೂ ದೂರ' ಎನ್ನುತ್ತಾರೆ ಅಶ್ವಿನಿ.



ಮಕ್ಕಳಿಗೆ ವಾಸುದೇವ ಕಾಳೆ ಕ್ರೀಡಾ ಶಿಸ್ತಿನ ಪಾಠ

ಬಾಲ್ಯದಲ್ಲಿ ಕ್ರೀಡಾ ಅಭ್ಯಾಸ ನಡೆಸಬೇಕಾದರೆ ನಿಕ್ಕರ್ ತೊಟ್ಟಿದ್ದೇ ಓಣಿ ಮಂದಿಗೆ ಕುಹಕವಾಗಿ ಕಂಡಿತು. 'ಕಳ್ಳಬೇಟೆ ಮಂದಿಗೆ ಇದೆಲ್ಲ ಬೇಕೋ' ಎಂದು ಜನರ ಗೇಲಿ ಮಾತಿಗೆ ತುತ್ತಾಗಬೇಕಾಯಿತು. 'ದಿನ್ ಬೆಳಗಾದ್ರಾ ಸಾರಾಯಿ, ಸೇಂದಿ ನಶೆಯಲ್ಲಿ ತೇಲಾಡೋ ಮಂದಿಗಾ ಯಾಕ್ ಬೇಕಿತ್ತ್ ಉಸಾಬರಿ'– ಹೀಗೆ ಹೀಯಾಳಿಸಿದ ಮಂದಿಯೂ ಇದ್ದಾರೆ. 'ಅವರಿಗೆಲ್ಲ ಉತ್ತರವೇ ಕ್ರೀಡೆ' ಅಶ್ವಿನಿ ಈ ಮಾತನ್ನು ಆತ್ಮವಿಶ್ವಾಸದಿಂದ ನುಡಿದರು.

ಜಿಲ್ಲಾ, ರಾಜ್ಯ, ರಾಷ್ಟ್ರಮಟ್ಟದಲ್ಲಿ ನಿರಂತರವಾಗಿ ಪದಕ, ಪುರಸ್ಕಾರ ಸಿಕ್ಕಾಗ ಹಲವರು ಪ್ರೋತ್ಸಾಹದ ಮಾತುಗಳನ್ನಾಡಿದರು. ಜನಪ್ರತಿನಿಧಿಗಳು ವೇದಿಕೆಗೆ ಕರೆದು ಸನ್ಮಾನಿಸಿ ಕೊಂಡಾಡಿದರು. ಕ್ರೀಡಾ ನೆರವು ಘೋಷಣೆ ಮಾಡಿದರು. ಇಷ್ಟೆಲ್ಲಾ ಆದರೂ, ತುರ್ಕಮೆನಿಸ್ತಾನದಲ್ಲಿ ನಡೆದ ಅಂತರರಾಷ್ಟ್ರೀಯ ಜುಡೊ ಪಂದ್ಯಾವಳಿಗೆ ಹೋಗಲು ಯಾರ ನೆರವೂ ಸಿಗಲಿಲ್ಲ ಎನ್ನುತ್ತಾರೆ ಅಶ್ವಿನಿ.

'ತುರ್ಕಮೆನಿಸ್ತಾನ ಅಂತರರಾಷ್ಟ್ರೀಯ ಪಂದ್ಯಾವಳಿಗೆ ಹೋಗಲು ಜುಡೊ ಅಸೋಸಿಯೇಷನ್‌ನಿಂದ ಆಯ್ಕೆಯಾದೆ. ಆದರೆ, ರೊಕ್ಕದ ನೆರವು ಸಿಗಲಿಲ್ಲ. ಮೀಟರ್ ಬಡ್ಡಿಯಲ್ಲಿ ನಮ್ಮ ತಂದಿ ₹4 ಲಕ್ಷ ಸಾಲ ತಂದಾರ್ರೀ; ಆ ತ್ರಾಸು ಹೇಳ್ಬೊಂಗ್ ಇಲ್ರೀ. ಅದರ ತಿಂಗಳ ಬಡ್ಡಿ ಕಟ್ಟಲು ಇವತ್ತಿಗೂ ಹೈರಾಣ ಆಗ್ಯಾರಾ. ನಮ್ ಕುಟುಂಬ ಸಾಲದ ಸುಳಿಗೆ ಸಿಲಕೈತಿ' ಎಂದು ಅಶ್ವಿನಿ, ತಂದೆ ವಾಸುದೇವ ಕಾಳೆ ಮುಖ ನೋಡಿದರು. 'ಚೋಕ್ರೊ, ಹೂನ್ ಬಾಳ್‌ಗ್ ಕಹಾತಾನ್ ಹುಬ್ ತ್ರಾಸ್' (ಮಕ್ಕಳ ಸಾಕೋದ್ ತ್ರಾಸ್ ಆಗೈತಿ) ಎಂದು ವಾಸುದೇವ ಕಾಳೆ ವಾಗ್ರಿ ಭಾಷೆಯಲ್ಲಿ ನೊಂದು ನುಡಿದರು.

ವಾಸುದೇವ ಕಾಳೆ ಅವರ ಎರಡನೇ ಮಗಳು ಚೈತ್ರಾ ಕೂಡ ರಾಜ್ಯಮಟ್ಟದ ಅಥ್ಲೀಟ್. ಹಲವು ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದಾರೆ. ಪದವಿ ಮುಗಿಸಿ ಎಲ್‌ಎಲ್‌ಬಿಗೆ ಸೇರಲು ತಯಾರಿ ನಡೆಸಿದ್ದಾರೆ. ಕಾಳೆಯವರ ಮಗ ಅಭಿಷೇಕ ಬಿ.ಎ. ಪ್ರಥಮ ವರ್ಷ ಓದುತ್ತಿದ್ದು, ಜುಡೊ ತರಬೇತಿ ಪಡೆಯುತ್ತಿದ್ದಾರೆ. ಈಗಾಗಲೇ ರಾಷ್ಟ್ರಮಟ್ಟದ ಹಲವು ಪಂದ್ಯಗಳಲ್ಲಿ ಭಾಗವಹಿಸಿ ಪದಕ, ಬಹುಮಾನ ಗಳಿಸಿದ್ದಾರೆ.

ಕೊನೆಯ ಮಗಳು, ಹದಿನೇಳು ವರ್ಷದ ತನುಶ್ರೀ ಪಿಯು ಓದುತ್ತಿದ್ದಾರೆ. ರಾಷ್ಟ್ರಮಟ್ಟದ ಜುಡೊ ಪಟು. ಮಧ್ಯಪ್ರದೇಶದ ಇಂದೋರ್, ಕೇರಳದ ತ್ರಿಶೂರ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಜುಡೊ ಪಂದ್ಯದಲ್ಲಿ ಭಾಗವಹಿಸಿರುವ ಹೆಗ್ಗಳಿಕೆ ಇವರದ್ದು. ಛತ್ತೀಸ್‌ಗಢದ ರಾಯಪುರದಲ್ಲಿ ನಡೆದ ರಾಷ್ಟ್ರಮಟ್ಟದ ಜುಡೊ ಪಂದ್ಯದಲ್ಲಿ ಚಿನ್ನದ ಪದಕ ಪಡೆದು ರಾಜ್ಯಕ್ಕೆ ಹೆಮ್ಮೆ ತಂದಿದ್ದಾರೆ. ರಷ್ಯಾದಲ್ಲಿ ನಡೆದ ಅಂತರರಾಷ್ಟ್ರೀಯ ಜುಡೊ ಸ್ಪರ್ಧೆಗೆ ಆಯ್ಕೆಯಾಗಿದ್ದರು. ಆದರೆ, ತಂದೆ ವಾಸುದೇವ ಕಾಳೆ ಅವರ ಮೇಲೆ ಇರುವ ಪೊಲೀಸ್ ಪ್ರಕರಣದಿಂದಾಗಿ ಪಾಸ್‌ಪೋರ್ಟ್ ಪಡೆಯಲು ಸಾಧ್ಯವಾಗಿಲ್ಲ. ಈ ತಾಂತ್ರಿಕ ಕಾರಣದ ಕಹಿ ನೆನಪು ತನುಶ್ರೀ ಮನದಲ್ಲಿ ಉಳಿದಿದೆ.

'ಯಾವ ನ್ಯೂಟ್ರಿಷನ್ ಇಲ್ಲದ ಅಭ್ಯಾಸ ನಮ್ಮದು. ಜೈವಿಕವಾಗಿ ಪಡೆದಿರೋ ದೇಹವೇ ನಮಗೆ ವರ. ಇದುವರೆಗೂ ಸರ್ಕಾರದ ಸ್ಕಾಲರ್‌ಶಿಪ್ ಜಿಲ್ಲಾ, ರಾಜ್ಯಮಟ್ಟದ ಪಂದ್ಯಗಳಿಗೆ ನೆರವಾಗಿದೆ. ಮುಂದೆ ಏಷ್ಯಾ ಕಾಮನ್‌ವೆಲ್ತ್ ಕ್ರೀಡಾಕೂಟ, ಮಿನಿ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಉದ್ದೇಶವಿದೆ. ರಾಷ್ಟ್ರ, ಅಂತರರಾಷ್ಟ್ರ ಮಟ್ಟದ ಪಂದ್ಯಾವಳಿಗಳಿಗೆ ನೆರವಿನ ಅಗತ್ಯವಿದೆ' ಎಂದು ಅಶ್ವಿನಿ ಮಾತು ಮುಂದುವರಿಸಿದರು.

ಅಪ್ಪನ ಹೊರೆ ತಗ್ಗಿಸಲೆಂದು ಕೆಲ ಸಮಯ ಬಾಲಕಿಯರ ಹಾಸ್ಟೆಲ್‌ನಲ್ಲಿ ಆತ್ಮರಕ್ಷಣೆಗಾಗಿ ಕರಾಟೆ ಕಲಿಸಿದ್ದೂ ಇದೆ. ಅದರಿಂದ ಸಿಗುತ್ತಿದ್ದ ಪುಡಿಗಾಸಿನಲ್ಲೇ ವಿದ್ಯಾಭ್ಯಾಸ ಮಾಡಿದ್ದೇನೆ. 'ಕ್ರೀಡೆಯಲ್ಲಿ ಸೋಲು–ಗೆಲುವು ಇದ್ದದ್ದೇ. ಪ್ರೋತ್ಸಾಹ ಸಿಕ್ಕರಾ ಬಡವ್ರು ಮಕ್ಳು ಬೆಳಿತಾವ್' ಎಂದು ಅಶ್ವಿನಿ ನುಡಿಯುತ್ತಿದ್ದರೆ ಬಗಲಿಗೆ ಕುಳಿತಿದ್ದ ಸೋದರಿಯರಾದ ಚೈತ್ರಾ, ತನುಶ್ರೀ, ಸೋದರ ಅಭಿಷೇಕ ಅಕ್ಕನ ಮಾತುಗಳಿಗೆ ಕಣ್ಣಲ್ಲೇ ಅನುಮೋದಿಸಿದರು.

ಪ್ರತಿಕ್ರಿಯಿಸಿ: feedback@sudha.co.in